## ವ್ಯಾಖ್ಯಾನ

# ನೀನೆ ಗತಿ ನೀನೆ ಮತಿ

1. **Ref.**: Haridasa Taranga Part-1, Published by M/s. Vyaasaanandadasa Pratishtaana, Bengaluru-98, First Edition 2014, page No. 82.
2. **Author:** Pandith Parashuram Betageri, Bengaluru.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

"ದೇವನೊಬ್ಬ ನಾಮ ಹಲವು" ಎಂಬ ಪ್ರಸಿದ್ಧವಾದ ಗಾದೆಯ ಮಾತನ್ನು ತಿಳಿಯದವರಿಲ್ಲ. ದೇವನೊಬ್ಬನೇ ಆದರೂ ದೇವತೆಗಳು ಬಹಳ ಇದ್ದಾರೆ. ಆ ದೇವತೆಗಳೆಲ್ಲರೂ ಆತನ ಆಜ್ಞಾಧಾರಕರೇ, ಆತನ ಆಜ್ಞೆಯಂತೆ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಾರೆ. ಅನಂತಾನಂತ ರೂಪಗಳನ್ನು ಧಾರಣೆ ಮಾಡಿರುವ ದೇವನು ಸರ್ವತ್ರ ವ್ಯಾಪ್ತನಾಗಿದ್ದಾನೆ. ಆತನ ಸೇವೆಯನ್ನು ಮಾಡಿ ಕೃತಾರ್ಥರಾಗುತ್ತಾರೆ. ಆತನ ದಾಸರು ಆತನಿಲ್ಲದೆ ಏನೂ ಇಲ್ಲ, ಆತನೇ ಸರ್ವಸ್ವನೆಂದು ದಾಸನು ತಿಳಿಯುತ್ತಾನೆ.

**ನೀನೆ ಗತಿ ನೀನೆ ಮತಿ ಸ್ವಾಮಿ ।**
**ನೀನಲ್ಲದನ್ಯತ್ರ ದೈವಗಳ ನಾನರಿಯೆ ॥ ಪ ॥**

ಶ್ರೀಮದಾಚಾರ್ಯರು 'ಹರಿರೇವ ಜಗತ್ಪಿತೃಮಾತೃಗತಿಃ' ಎಂದಿರುವರು ಅದನ್ನೇ ದಾಸರು ಪರಮಾತ್ಮನೇ ನೀನೆ ನನಗೆ ಗತಿದಾಯಕನು (ಮೋಕ್ಷವನ್ನು ಕರುಣಿಸುವವನು) ನೀನೇ ನನಗೆ ಸದ್ಬುದ್ಧಿ (ಮತಿ)ಯನ್ನು ಕೊಡುವವನಾಗಿದ್ದೀಯೇ. ನಿನ್ನ ಹೊರತಾಗಿ ಬೇರೆ ದೇವರನ್ನು ನಾನು ತಿಳಿದಿಲ್ಲ. ನೀನೊಬ್ಬನೇ ಸರ್ವೋತ್ತಮನು ಎಂಬ ವಿಷಯವು ಚೆನ್ನಾಗಿ ನನಗೆ ಮನದಟ್ಟಾಗಿದೆ. ಹೀಗಿರುವಾಗ ಬೇರೆ ಅಸಮರ್ಥರ ಬಳಿಗೆ ನಾನೇಕೆ ಹೋಗಲಿ ? ಅವರೆಲ್ಲರೂ ನಿನ್ನ ಬಳಿಗೆ ಬರುವವರಲ್ಲವೇ ? ಎಂದರು.

**ನಿನ್ನ ಪಾದಾರವಿಂದದ ಸೇವೆಯ ಮಾಡಿ ।**
**ನಿನ್ನಧ್ಯಾನದಲಿರುವ ಹಾಗೆ ಮಾಡು ॥**

**ನಿನ್ನ ದಾಸರ ಸಂಗದಿಂದ ದೂರಿಡದೆನಗೆ ।**

**ಸನ್ಮಾರ್ಗದಿಂದಿರಿಸೊ ಜಗದೀಶ ಅಘನಾಶ ॥ 1 ॥**

ಯಾವಾಗಲೂ ನಾನು ನಿನ್ನ ಪಾದಕಮಲಗಳ ಸೇವೆಯನ್ನು ಮಾಡುವಂತೆ ಅನುಗ್ರಹಿಸು. ನಾನು ಯಾವಾಗಲೂ ನಿನ್ನನ್ನೇ ಕುರಿತು ಧ್ಯಾನಿಸುವಂತೆ ನನಗೆ ಅನುಗ್ರಹಿಸು. ನಿನ್ನ ದಾಸರೆನಿಸಿಕೊಳ್ಳುವವರು ಇದೇ ಕೆಲಸವನ್ನು ಮಾಡುತ್ತಿದ್ದಾರೆಂದು ನನಗೆ ಗೊತ್ತು. ಆದುದರಿಂದಲೇ ನಾನು ಹರಿದಾಸರ ಸಂಗದಲ್ಲಿಯೇ ಯಾವಾಗಲೂ ಇರಲು ಹಾತೊರೆಯುತ್ತಿದ್ದೇನೆ. ಹರಿದಾಸರೊಡನೆ ಇರುವುದೇ ಸನ್ಮಾರ್ಗವು ಮುಂದೆ ತಂತಾನೇ ಪರಮಾತ್ಮನಲ್ಲಿ ಹೆಚ್ಚಿನ ರತಿ ಉಂಟಾಗುತ್ತದೆ. ಜಗತ್ತಿನ ಅಧಿಪತಿಯಾದ ಪರಮಾತ್ಮನೇ ಭಕ್ತರ ಪಾಪಗಳನ್ನು ಪರಿಹರಿಸುವುದರಿಂದ ನೀನು ಅಘನಾಶನು (ಪಾಪಹರಿಹಾರಕನು).

ನಾವು ಸನ್ಮಾರ್ಗದಲ್ಲಿ ನಡೆಯಬೇಕಾದರೆ ಹರಿದಾಸರನ್ನು ಶರಣು ಹೋಗಬೇಕು. ಆದುದರಿಂದಲೇ "ಹರಿದಾಸರ ಸಂಗ ದೊರಕಿತು ಎನಗೀಗ ಇನ್ನೇನಿನ್ನೇನು ॥ ವರಗುರು ಉಪದೇಶ ನೆರವಾಯ್ತು ಎನಗೆ ಇನ್ನೇನಿನ್ನೇನು" ಎಂದು ಪುರಂದರದಾಸರು ಹೇಳಿದ್ದಾರೆ. ಅವರೇ "ಹರಿಯ ದಾಸರಿಗಿನ್ನು ಸರಿಯುಂಟೆ । ನರಹರಿಯ ನಂಬಿದವರಿಗೆ ಕೇಡುಂಟೆ ॥" ಎಂದು ಹೇಳಿ ಹರಿದಾಸರನ್ನು ಸೇರುವುದೇ ನಿಜವಾದ ದಾರಿ ಎಂದು ತೋರಿಸಿಕೊಟ್ಟಿದ್ದಾರೆ.

**ಕಮಲ ನಾಭಿಯಲಿ ಬೊಮ್ಮನ ಪುಟ್ಟಿಸಿದೆ ಹರಿಯೆ**

**ಕಮಲಸಖಕೋಟಿ ಪ್ರಕಾಶ ಈಶ ॥**

**ಕಮಲಕರತಳದಿ ಅಭಯವನಿತ್ತು ಭಕುತರಿಗೆ**

**ಕಮಲಾಕ್ಷನೆನಿಸಿದೆಯೊ ಕಮಲಾರಮಣ ॥ 2 ॥**

ಇಲ್ಲಿ ದಾಸರು ಶ್ರೀಹರಿಯ ವಿಶೇಷತೆಯನ್ನು ವರ್ಣಿಸುತ್ತಾರೆ.

ಸೃಷ್ಟಿಕಾಲದಲ್ಲಿ ಶ್ರೀಹರಿಯು ತನ್ನ ನಾಭಿಕಮಲದಿಂದ ಚತುರ್ಮುಖ ಬ್ರಹ್ಮನನ್ನು ಹುಟ್ಟಿಸಿದನು. ಆ ಚತುರ್ಮುಖ ಬ್ರಹ್ಮನಿಂದ ಮುಂದೆ ಜಗತ್ತಿನ ಸೃಷ್ಟಿಯನ್ನು ಮಾಡಿಸಿದನು. ಭಾಗವತವು ಈ ಸಂದರ್ಭವನ್ನು ಬಹುವಾಗಿ ವರ್ಣಿಸುತ್ತದೆ. ಸೂರ್ಯ ಕೋಟಿ ಪ್ರಕಾಶ ವುಳ್ಳವನಾದ (ಕಮಲಸಖ–ಸೂರ್ಯ) ಶ್ರೀಹರಿಯೇ ಈಶನು. ಕಮಲದಂತಹ ಕರಗಳುಳ್ಳವನಾದ ಶ್ರೀಹರಿಯು ತನ್ನ ಅಭಯಹಸ್ತವನ್ನು ಭಕುತರಿಗೆ

ಕರುಣಿಸಿದ್ದಾನೆ.  ಕಮಲದಂತಿರುವ ಅಭಯಹಸ್ತದ ಬುಡದಲ್ಲಿಯೇ ಭಕ್ತರು ರಕ್ಷಣೆಯನ್ನು ಪಡೆಯುತ್ತಿದ್ದಾರೆಂದರೆ ಆತನು ಎಷ್ಟು ಕರುಣಾಮಯಿ ? ಕಮಲವು ನೋಡಲು ಕಣ್ಣಿಗೆ ಸುಂದರವಾಗಿ ಕಾಣುತ್ತದೆ. ಕಮಲದಂತೆ ಕಣ್ಣುಳ್ಳವನಾದ (ಕಮಲಾಕ್ಷ) ಶ್ರೀಹರಿಯನು ಎಷ್ಟು ನೋಡಿದರೂ ಇನ್ನೂ ನೋಡಬೇಕೆಂಬ ಮನೋಹರನು ಅವನು.  ಅವನೇ ಲಕ್ಷ್ಮೀದೇವಿಯವರಿಗೆ (ಕಮಲಾ) ಪತಿಯಾಗಿರುವನು.

**ಶಿಶುಪಾಲದಂತವಕ್ತ್ರರ ಶಿರವ ಛೇದಿಸಿದೆ ।**
**ಪಶುಪತಿಯ ಆಭರಣ ವೈರಿ ವಾಹನನ ॥**
**ಅಸುರಕುಲ ಸಂಹರಿಸಿ ಭಕ್ತಜನರನು ಪೊರೆದೆ ।**
**ವಸುಧೇಶ ಪುರಂದರವಿಠಲರಾಯ ॥ 3 ॥**

ಪರಮಾತ್ಮನು ತನ್ನ ಅಭಯಹಸ್ತಗಳಿಂದ ತನ್ನ ಭಕ್ತರನ್ನು ರಕ್ಷಿಸುವುದಲ್ಲದೆ ತನ್ನ ಭಕ್ತರಿಗೆ ತೊಂದರೆಯನ್ನು ಕೊಡುವ ದೈತ್ಯರನ್ನು ಅಸುರರನ್ನೂ ನಿಗ್ರಹಿಸುವ ಕಾರ್ಯವನ್ನು ಜೊತೆ ಜೊತೆಯಲ್ಲಿಯೇ ಮಾಡುತ್ತಾನೆ.  ಏಕಕಾಲದಲ್ಲಿ ಭಕ್ತರ ರಕ್ಷಣೆ ಮತ್ತು ದುಷ್ಟ ಜನರ ಸಂಹಾರ ಏನಾಶ್ಚರ್ಯ ! ನೂರು ತಪ್ಪೆಸಗಿದ ಶಿಶುಪಾಲನ ಶಿರಚ್ಛೇದ, ದಂತವಕ್ತ್ರನ ನಿಗ್ರಹವನ್ನು ಶ್ರೀಕೃಷ್ಣನು ಮಾಡಿದ್ದು ಪ್ರಸಿದ್ಧವೇ ಆಗಿದೆ. ಪಶುಪತಿಯೆನಿಸಿದ ಮಹರುದ್ರ ದೇವರಿಗೆ ಆಭರಣ ರೂಪದಲ್ಲಿ ಇರುವ ಸರ್ಪನಿಗೆ ವೈರಿಯೆನಿಸುವ ಗರುಡದೇವನನ್ನು ವಾಹನವನ್ನುಳ್ಳವನಾದ ಶ್ರೀಹರಿಯೇ ನಿನ್ನ ಮಹಿಮೆ ಅಪಾರ.  ದುಷ್ಟರಾದ ಅಸುರರ ಕುಲವನ್ನೇ ನಾಶಮಾಡಿ ನಿನ್ನ ಭಕ್ತರನ್ನು ಪೊರೆದಿರುವ ಪರಮಾತ್ಮನೇ ನೀನು ಭೂದೇವಿಯ ರಮಣನಾಗಿದ್ದೀಯೆ.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** ಪಂ॥ ಶ್ರೀ ಪರಶುರಾಂ ಬೆಟಗೇರಿ